# ವದಂತಿ

ಜಾಗ ಬಿಡಿ ನನ್ನ ಕೊಂದವರ
ಕಾರಣ ಕೇಳಬೇಕಿದೆ

ನನ್ನ ಗೋರಿಯ ನೆತ್ತಿಗೆ ಹುಗಿದ
ಕರಿ ಕಲ್ಲಿನ ಮೇಲೆ ನೀವು
ಆಕಸ್ಮಿಕ ಎಂದು ಗೀಚಿಬಿಟ್ಟರಿ
ಉಳಿದ ಗೋರಿಗಳ ತಲೆಬರಹಗಳು ನಗುವಂತೆ

ಆಕಸ್ಮಿಕ ಸಾವು ನನ್ನದಲ್ಲ
ಅದು ಸುಳ್ಳು ನಿಮಗೂ ಗೊತ್ತು
ಯಾಕೆಂದು ಪ್ರಶ್ನಿಸುವುದು ನನಗಾಗಲಿಲ್ಲ
ಉತ್ತರಿಸುವ ಧೈರ್ಯ ನಿಮಗಿಲ್ಲ

ಹೀಗೆ ಎಷ್ಟು ಗೋರಿಗಳ ಮೇಲೆ ನಿಮ್ಮ
ಸುಳ್ಳುವಾಣಿಯ ಮೆತ್ತಿದ್ದೀರಿ
ವದಂತಿಯ ಹಬ್ಬಿಸಿದ್ದೀರಿ
ಸುಳ್ಳಿಗೆ ಸುಳ್ಳೆ ಸಾಕ್ಷಿ

ನಾ ಮಣ್ಣಲಿ ಮಣ್ಣಾಗಿದ್ದೇನೆ ನಿಜ
ಕೊಂದವರ ಮೇಲಿನ ಕಿಚ್ಚು
ಕ್ಷಮಿಸಿದಷ್ಟು ಬಲವಾಗುತ್ತಿದೆ.
ಇಲ್ಲಿ ಸೇಡಿಗೆ ಸೇಡು ಉತ್ತರವಲ್ಲ.

ಮರ್ಯಾದಾ ಹತ್ಯೆಯ ಹೆಸರಲ್ಲಿ
ಇದ್ದವರೂ ಕಾರಣವಿಲ್ಲದೆ ಸಾಯದಿರಲಿ

● **ಜೋಸೆಫ್ ವಾಯ್. ಮಲ್ಲಾಡಿ**